ಬೇಲೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆಗಳು ಖಾಲಿ ಇರುವ ಬಗ್ಗೆ.

528(5121) ಶ್ರೀ ಪುಟ್ಟರಂಗನಾಥ್ ಎನ್.ಹೆಚ್. (ಬೇಲೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆ ಬೇಲೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಖಾಲಿ ಇರುವ ವೈದ್ಯರ ಹುದ್ದೆಯನ್ನು ಎಂದು ಭರ್ತಿ ಮಾಡಲಾಗುವುದು?

ಡಾ: ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿದೆ.

ಆ) ಸದರಿ ಆಸ್ಪತ್ರೆಗೆ ಇತ್ತೀಚೆಗೆ ಎರಡು ವೈದ್ಯರನ್ನು ವರ್ಗಾಯಿಸಿ ನೇಮಕ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಆರುರ 684 ಹೆಚ್ ಹೆಚ್ 2000, ದಿನಾಂಕ 27.10.2000ರ ರೀತ್ಯ ಆಯಾ ಜಿಲ್ಲಾಧಿಕಾರಿಗಳಿಗೆ ಅವರ ಆಡಳಿತ ವ್ಯಾಪ್ತಿಗೆ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :— ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ಪದೇ ಪದೇ ಕೇಳುತ್ತಿದ್ದೇನೆ. ತಜ್ಞ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ತಜ್ಞ ವೈದ್ಯರುಗಳ್ಯಾರೂ ಅರ್ಜಿ ಹಾಕುವುದಿಲ್ಲ. ಬೇಲೂರಿನ ಆಸ್ಪತ್ರೆ ಜನರಲ್ ಆಸ್ಪತ್ರೆಯಾಗಿ ಸುಮಾರು ಆರು ವರ್ಷಗಳಾದರೂ ಕೂಡ ತಜ್ಞ ವೈದ್ಯರ ಹುದ್ದೆಗಳು ಖಾಲಿ ಇವೆ. ಅಲ್ಲಿಗೆ ಕೇವಲ ಇಬ್ಬರು ವೈದ್ಯರನ್ನು ಹಾಕಿದ್ದೀರಿ. ಒಂದು ದಿವಸಕ್ಕೆ ಸುಮಾರು 5000ಕ್ಕಿಂತ ಹೆಚ್ಚಿಗೆ ತಪಾಸಣೆಗೆಂದು ಬರುವ ಜನರನ್ನು ಆ ಇಬ್ಬರು ವೈದ್ಯರು ನಿರ್ವಹಣೆ ಮಾಡಲು ಸಾಧ್ಯವೇ? ಇದುವರೆಗೂ ತಜ್ಞ ವೈದ್ಯರನ್ನು ನೇಮಕ ಮಾಡದಿರಲು ಕಾರಣಗಳೇನು ಎಂದು ಹೇಳಬೇಕು.

ಶ್ರೀ ಹಾಗೋಡು ತಿಮ್ಮಪ್ಪ :— ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಕೂಡ ತಜ್ಞ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರ ಈಗಾಗಲೇ ನಿರ್ದೇಶನವನ್ನು ಕೊಟ್ಟಿದೆ. ಅದರಂತೆ ಅದನ್ನು ಬೇಗ ನೇಮಕ ಮಾಡುತ್ತವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :— ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಸಿಗುವುದಿಲ್ಲ. ಅವರನ್ನು ಇಲ್ಲಿಂದಲೇ ನೇಮಕ ಮಾಡಬೇಕಾಗುತ್ತದೆ. ಇಲ್ಲಿ ಕಳೆದ ಐದು ವರ್ಷಗಳಿಂದಲೂ ಭರ್ತಿ ಮಾಡಲು ಸಾಧ್ಯವಾಗಿಲ್ಲ. ದಯಮಾಡಿ ಇದನ್ನು ಆದಷ್ಟು ಬೇಗ ಮಾಡಿಕೊಂಡು ಸಾಧ್ಯವೇ?

ಶ್ರೀ ಕಾಗೋಡು ತಿಮ್ಮಪ್ಪ :— ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಜ್ಞ ವೈದ್ಯರನ್ನು ನೇಮಕ ಮಾಡತಕ್ಕಂಥಾದ್ದಕ್ಕೆ ಇದುವರೆಗೂ ಆದೇಶವಿರಲಿಲ್ಲ. ಅವರನ್ನು ನೇಮಕ ಮಾಡಿಕೊಳ್ಳಲು ಈಗ ಆದೇಶವನ್ನು ಕೊಡಲಾಗಿದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :— ಒಬ್ಬ ಫಿಸೀಷಿಯನ್ ಮತ್ತು ಒಬ್ಬರು ಜನರಲ್ ಸರ್ಜನ್ ರನ್ನು ಕೂಡಲೇ ಹಾಕುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಈಗಾಗಲೇ ಸರ್ಕಾರ ಆದೇಶ ಕೊಟ್ಟಿದ್ದು, ಜಿಲ್ಲಾಧಿಕಾರಿಗಳು ಅದನ್ನು ಮಾಡುತ್ತಾರೆ. ಒಂದು ವೇಳೆ ಜಿಲ್ಲಾ ಮಟ್ಟದಲ್ಲಿ, ತಜ್ಞ ವೈದ್ಯರುಗಳು ಸಿಗದಿದ್ದರೆ, ಬೇರೆ ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ಆಲೋಚನೆ ಮಾಡುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಹೆಡ್ ಕ್ವಾರ್ಟರ್ ಗಳಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇದೆ. ಇದು ಸರ್ಕಾರಕ್ಕೆ ಬಹಳ ದಿವಸಗಳಿಂದಲೂ ಗೊತ್ತಿದೆ. ಸಕಲೇಶಪುರದ ತಾಲ್ಲೂಕು ಹೆಡ್ ಕ್ವಾರ್ಟರ್ ಆಸ್ಪತ್ರೆಯಲ್ಲಿ ಇಬ್ಬರು ವೈದ್ಯರುಗಳಿದ್ದಾರೆ. ಅವರು ಏನು ಕೆಲಸ ಮಾಡುತ್ತಾರೋ ಗೊತ್ತಿಲ್ಲ. ನಾವು ಶ್ರಮಪಟ್ಟು ಅಲ್ಲಿಗೆ ಡಾಕ್ಟರುಗಳನ್ನು ಹಾಕಿಸಿಕೊಂಡರೆ ನಾಲ್ಕು ದಿವಸಗಳಲ್ಲೇ ಅವರು ಟ್ರಾನ್ಸ್ಫರ್ ಮಾಡಿಸಿಕೊಂಡು ಹೋಗುತ್ತಾರೆ. ರಾಮನಗರದಿಂದ ಒಬ್ಬರು ೧ ಅಂಡ್ ಟಿ ಮತ್ತು ಒಬ್ಬರು ಮೂಳೆ ತಜ್ಞರನ್ನು ಹಾಕಿದರು. ನಾಲ್ಕನೇ ದಿವಸಕ್ಕೇ ಅವರು ಹಾಸನದ ಜಿಲ್ಲಾ ಆಸ್ಪತ್ರೆಗೆ ಟ್ರಾನ್ಸ್ಫರ್ ಮಾಡಿಸಿಕೊಂಡು ಹೋದರು. ರಾಮನಗರದಿಂದ ಸಕಲೇಶಪುರಕ್ಕೆ ಟ್ರಾನ್ಸ್ಫರ್ ಮಾಡಿದವರು ಯಾರು? ಸಕಲೇಶಪುರದಿಂದ ಹಾಸನಕ್ಕೆ ಟ್ರಾನ್ಸ್ಫರ್ ಮಾಡಿದವರು ಯಾರು ಎಂದು ಗೊತ್ತಾಗುವುದಿಲ್ಲ. ಆ ಕ್ಷೇತ್ರಗಳಲ್ಲಿನ ಶಾಸಕರು ಆಸ್ಪತ್ರೆಗಳ ವಿಚಾರದಲ್ಲಿ ಜನಗಳಿಗೆ ಮುಖ ತೋರಿಸಲು ಆಗುವುದಿಲ್ಲ. ಪುಟ್ಟ ರಂಗನಾಥ್ ರವರು ಹೇಳಿದ ಹಾಗೆ ಬೇಲೂರು ಮತ್ತು ಸಕಲೇಶಪುರಗಳು ಸಂಪೂರ್ಣವಾಗಿ ಪ್ಲಾಂಟೇಷನ್ ಏರಿಯಾ ಇರತಕ್ಕಂಥ ಪ್ರದೇಶಗಳು. ಲೇಬರರ್ಸ್ ಇರುವ ಈ ಜಾಗಗಳಲ್ಲಿ ವೈದ್ಯರುಗಳ ಕೊರತೆ ಅತೀವವಾಗಿದೆ. ಅಲ್ಲಿ ಡಾಕ್ಟರುಗಳಿಲ್ಲ ಎಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ಈಗ ವೈದ್ಯರುಗಳ ನೇಮಕಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಾವು ವೈದ್ಯರುಗಳನ್ನು ಗುರುತು ಮಾಡಿಕೊಡುತ್ತೇವೆ, ನೀವು ಅವರನ್ನು ನಮ್ಮಲ್ಲಿಗೆ ಕೊಡುತ್ತೀರಾ? ಎಂದು ನಾನು ಮೊನ್ನೆ ಈ ಸಭೆಯಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳನ್ನು ಕೇಳಿದೆ. ಅದಕ್ಕೆ ಅವರು, ಆ ರೀತಿ ಆಗುವುದಿಲ್ಲ, ರೋಸ್ಟರ್ ಪದ್ಧತಿಯಂತೆ ಆಗಬೇಕು ಎಂದು ಹೇಳುತ್ತಾರೆ. ಇದನ್ನು ಯಾವಾಗ ಸರಿಪಡಿಸುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ, ಮೂಲ ಪ್ರಶ್ನೆಗೆ ಇದು ಸಂಬಂಧಪಟ್ಟಲ್ಲದೇ ಇದ್ದರೂ ಸಹ, ತಾಲ್ಲೂಕು ಮಟ್ಟದ ಮತ್ತು ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ನೇಮಕ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರದಿಂದ ಜಿಲ್ಲಾಧಿಕಾರಿಗಳಿಗೆ ಆಜ್ಞೆ ಹೋಗಿರುತ್ತದೆ. ಇನ್ನು ಸ್ವಲ್ಪ ದಿವಸಗಳಲ್ಲಿ ಡಾಕ್ಟರುಗಳ ಕೊರತೆ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಲ್ಲಿ ಸಿಗುತ್ತದೆ. ಇನ್ನು ಹಾಲಿ ಇದ್ದ ಡಾಕ್ಟರ್ ಅನ್ನು ಟ್ರಾನ್ಸ್‌ಫರ್ ಮಾಡಿರುವ ವಿಚಾರ ಇಲ್ಲಿ ಬರುವುದಿಲ್ಲ. ಟ್ರಾನ್ಸ್‌ಫರ್ ಯಾಕಾಗಿ ಆಗಿದೆಯೋ ಗೊತ್ತಿಲ್ಲ. ಗುತ್ತಿಗೆ ಆಧಾರದ ಮೇಲೆ ಡಾಕ್ಟರುಗಳನ್ನು ನೇಮಕ ಮಾಡಿದಾಗ ಅವರನ್ನು ಟ್ರಾನ್ಸ್‌ಫರ್ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಹೆಚ್.ಸಿ. ಬಸವರಾಜ್ :— ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಆಸ್ಪತ್ರೆಗಳ ವಿಷಯದಲ್ಲಿ ನಾನು ಮಾತನಾಡುತ್ತಿದ್ದೇನೆ. ಪಿರಿಯಾಪಟ್ಟಣದ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ಐದು ಹುದ್ದೆಗಳು ಖಾಲಿ ಇದ್ದು ಅಲ್ಲಿ ಒಬ್ಬರೂ ಸಹ ತಜ್ಞ ವೈದ್ಯರು ಇಲ್ಲ. ಇಲ್ಲಿಯ ಜನರು ವಿಪರೀತ ಹಣ ಖರ್ಚು ಮಾಡಿಕೊಂಡು ಮೈಸೂರು, ಬೆಂಗಳೂರು ಆಸ್ಪತ್ರೆಗಳಿಗೆ ಬರುತ್ತಿದ್ದಾರೆ. ತಜ್ಞ ಡಾಕ್ಟರುಗಳಿಲ್ಲದೆ ಹಣ ಖರ್ಚು ಮಾಡಿ ಬೇರೆ ಕಡೆಗೆ ಬಂದು ಹೋಗುವುದಕ್ಕೆ ಆಗದೇ ಇದ್ದಂಥ ಜನರು, ರೋಗಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇವತ್ತು ಗುತ್ತಿಗೆ ಆಧಾರದ ಮೇಲೆ ಡಾಕ್ಟರುಗಳನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಘನ ಸರ್ಕಾರದವರು ಹೇಳುತ್ತಿದ್ದಾರೆ. ಗುತ್ತಿಗೆ ಆಧಾರದ ಮೇಲೆ ತಜ್ಞ ವೈದ್ಯರು ಯಾರೂ ಕೂಡ ಬರುವುದಕ್ಕೆ ತಯಾರಿಲ್ಲ. ಈಗಾಗಲೇ ಆರು ತಿಂಗಳು ವಿಳಂಬವಾಗಿದೆ. ಮಾನ್ಯ ಶಿವಪ್ಪನವರು ಹೇಳಿದ ಹಾಗೆ ಶಾಸಕರು ಕೇಂದ್ರ ಸ್ಥಾನಕ್ಕೆ ಹೋದಾಗ ಹೆಂಗಸರು, ಮಕ್ಕಳು ಸಹಿತ ಎಲ್ಲರೂ ಕೂಡ ಡಾಕ್ಟರುಗಳು ಆಸ್ಪತ್ರೆಗಳಿಗೆ ಬಂದಿದ್ದಾರೆಯೇ, ಅವರುಗಳನ್ನು ಸರ್ಕಾರದಿಂದ ನೇಮಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಹಾಕಿ ನಮಗೆ ಅಲ್ಲಿ ಇರಲಿಕ್ಕೆ ಬಿಡುತ್ತಿಲ್ಲ. ಬಹಳ ಕಷ್ಟ ಆಗುತ್ತಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಮೈಸೂರು, ಬೆಂಗಳೂರು ಹೀಗೆ ಜಿಲ್ಲಾಮಟ್ಟದಲ್ಲಿರತಕ್ಕಂಥ ಅನೇಕ ತಜ್ಞ ವೈದ್ಯರನ್ನು ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಿ ಕಡ್ಡಾಯ ಐದು ವರ್ಷಸೇವೆ ಸಲ್ಲಿಸುವಂಥ ವ್ಯವಸ್ಥೆಯನ್ನು ಸರ್ಕಾರದಿಂದ ಮಾಡಲೇಬೇಕು. ಈ ಬಗ್ಗೆ ಸರ್ಕಾರ ತೀವ್ರ ಗಮನಹರಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಜ್ಞರನ್ನು ನೇಮಕ ಮಾಡುವ ವಿಚಾರದಲ್ಲಿ ಕಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡಿಕೊಳ್ಳಲು ಆದೇಶ ಹೋಗಿದೆ. ಆ ಪ್ರಕ್ರಿಯೆ ಆದ ಮೇಲೆ ಸಹ ವೈದ್ಯರು ಸಿಗದಿದ್ದಲ್ಲಿ, ಮುಂದೆ ಏನು ಮಾಡಬೇಕೆಂಬುದನ್ನು ಸರ್ಕಾರ ತೀರ್ಮಾನ ಮಾಡುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಡಿ.ಸಿ.ಯವರಿಗೆ ತಾಲ್ಲೂಕು ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ನೇಮಕ ಮಾಡಲಿಕ್ಕೆ ಪವರ್ ಇಲ್ಲ. ಆದರೆ ನಮ್ಮ ಮುಂಡರಗಿ ತಾಲ್ಲೂಕು ಆಸ್ಪತ್ರೆಯಲ್ಲಿ ಇದ್ದಂಥ ಒಬ್ಬರೇ ಒಬ್ಬ ಡಾಕ್ಟರನ್ನು ಸಹ ವರ್ಗ ಮಾಡಿದ್ದಾರೆ. ಈಗ ಅಲ್ಲಿ ಡಾಕ್ಟರ್ ಇಲ್ಲ. ಹುದ್ದೆ ಖಾಲಿ ಇದೆ. ಹೀಗಾದರೆ ಅಲ್ಲ ಆಸ್ಪತ್ರೆಯನ್ನು ಹೇಗೆ ನಡೆಸುವುದು? ದಯವಿಟ್ಟು ಅಲ್ಲಿಗೆ ಡಾಕ್ಟರನ್ನು ನೇಮಕ ಮಾಡುತ್ತೀರಾ? ಇದ್ದ ಒಬ್ಬ ಡಾಕ್ಟರನ್ನು ಸಹ ಬೇರೆ ಕಡೆಗೆ ವರ್ಗ ಮಾಡಿರುವುದು ಯಾವ ನ್ಯಾಯ?

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಕಂಟ್ರಾಕ್ಟ್ ಬೇಸಿಸ್ ಮೇಲೆ ಎಕ್ಸ್‌ಪರ್ಟ್ ಡಾಕ್ಟರ್ಸನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಸರ್ಕಾರದಿಂದ ಆದೇಶ ಹೋಗಿದೆ. ನೇಮಕ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಜಿಲ್ಲಾ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ನೇಮಕ ಮಾಡುವಾಗ ಹಾಸನದ ಜಿಲ್ಲಾ ಆಸ್ಪತ್ರೆಗೆ ಸುಮಾರು ಆರುಮಂದಿ ಆರ್ಥೋಪೆಡಿಕ್ಸ್ ಸರ್ಜನ್ ರನ್ನು ಮತ್ತು ಆರು ಮಂದಿ ಅನಸ್ಥೇಷಿಯನ್‌ರನ್ನು ನೇಮಕ ಮಾಡಿದೆ. ಆದರೆ ಬೇರೆ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ನೇಮಕ ಮಾಡುವುದಕ್ಕೆ ಆಗುತ್ತಿಲ್ಲ ಈ ತರಹ ಏಕೆ ಮಾಡುತ್ತೀರಿ? ಇದು ತಪ್ಪಲ್ಲವೇ? ಒಂದು ಜನರಲ್ ಆಸ್ಪತ್ರೆಗೆ ಎಷ್ಟು ಜನ ಅನಸ್ಥೇಷಿಯನ್ ಬೇಕು, ಎಷ್ಟು ಜನ ಆರ್ಥೋಪೆಡಿಕ್ಸ್ ಸರ್ಜನ್‌ರನ್ನು ಹಾಕಬೇಕೆಂಬ ನಿಯಮ ಇಲ್ಲವೇ? ಇಂಥವನ್ನು ಕೇಳುವುದು ತಪ್ಪು ಎಂದು ತಮಗೆ ಅನಿಸಿರಬಹುದು. ಒಂದೇ ಕಡೆಗೆ ಒಂದೇ ಗ್ರೇಡ್‌ನಲ್ಲಿರತಕ್ಕಂಥ ಡಾಕ್ಟರುಗಳನ್ನು ನೇಮಕ ಮಾಡಿರತಕ್ಕಂಥ ವಿಚಾರ ಸರ್ಕಾರದ ಗಮನಕ್ಕೆ ಬಂದಿರಲಿಲ್ಲವೇ? ಇಂಥ ತಪ್ಪುಗಳನ್ನು ಏಕೆ ಮಾಡುತ್ತಿದ್ದೀರಿ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ :— ಮಾನ್ಯ ಅಧ್ಯಕ್ಷರೆ, ದಂತವೈದ್ಯ ಹುದ್ದೆಗಳು ಖಾಲಿ ಇದ್ದರೆ ಅದನ್ನು ತುಂಬಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೀರಾ? ಅಥವಾ ಕೊಡುವ ವಿಚಾರ ಸರ್ಕಾರದಲ್ಲಿ ಇದೆಯೇ? ಎಂಬುದನ್ನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಇದು ಬೇಲೂರು ಆಸ್ಪತ್ರೆ ವಿಚಾರವಾಗಿ ಮೂಲ ಪ್ರಶ್ನೆ ಆಗಿದೆ. ಈಗ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರುವಂಥದ್ದು ಜಿಲ್ಲಾಮಟ್ಟದ ಆಸ್ಪತ್ರೆಗಳ ವಿಚಾರವಾಗಿದೆ. ಆದ್ದರಿಂದ ಈ ಪ್ರಶ್ನೆಗಳು ಯಾವುದೂ ಮೂಲ ಪ್ರಶ್ನೆಗೆ ಸಂಬಂಧವಾಗಿ ಬರುವುದಿಲ್ಲ. ಬೇಲೂರು ಆಸ್ಪತ್ರೆಯಲ್ಲಿ ತಜ್ಞ ವೈದ್ಯರುಗಳ ಹುದ್ದೆ ಖಾಲಿ ಇದ್ದರೆ ಅವುಗಳನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡುತ್ತಾರೆ. ಸರ್ಕಾರದಿಂದ ಅವರಿಗೆ ಆದೇಶ ಹೋಗಿದೆ.